# ಆಹಾ ಸುದ್ದಿ!

★ ಸಸಿತೋಟ

ಜಪಾನಿನಲ್ಲಿ ಇತ್ತೀಚೆಗೆ ಶವವನ್ನು ಅಂತ್ಯಸಂಸ್ಕಾರಕ್ಕೆ ಅಣಿಗೊಳಿಸುವ ಕುರಿತು ಸ್ಪರ್ಧೆ ಏರ್ಪಡಿಸಲಾಗಿತ್ತು. ಲೈಫ್ ಎಂಡಿಂಗ್ ಇಂಡಸ್ಟ್ರಿ ಎಂಬ ಕಂಪೆನಿ ಇದನ್ನು ಏರ್ಪಡಿಸಿತ್ತಂತೆ. ಸ್ಪರ್ಧೆಯ ಸಂದರ್ಭದಲ್ಲಿ ಉದುರಿದ ‘ಅತಿ ಸುಂದರ’ ಎಂಬ ಅಣಿಮುತ್ತುಗಳು ಸ್ಪರ್ಧೆಗೆ ಮಾತ್ರ ಸೀಮಿತ ಎಂದು ಕಂಪೆನಿ ಕೊನೆಯಲ್ಲಿ ಸ್ಪಷ್ಟನೆ ನೀಡಿತಂತೆ.



ಚೀನಾದಲ್ಲಿ ಭಾವಿ ಕಳ್ಳನೊಬ್ಬ ರಾತ್ರಿ ಮಾರಾಟ ಮಳಿಗೆಗೆ ನುಗ್ಗಲು ಯತ್ನಿಸಿದ. ಆದರೆ ಬೆಳಗಿನವರೆಗೂ ಅಲ್ಲೇ ಮಲಗಿದ್ದನಂತೆ. ಕಳವಿನ ಸಂದರ್ಭದಲ್ಲಿ ಕೈಕೊಟ್ಟಿದ್ದು ಕಾಲಂತೆ. ಎತ್ತಿದ್ದ ಷಟರ್ ಕಾಲಿನ ಮೇಲೆ ಬಿದ್ದು ಪೊಲೀಸರು ಬರುವವರೆಗೂ ಅಲ್ಲೇ ಒದ್ದಾಡುತ್ತ ಬಿದ್ದಿದ್ದನಂತೆ. ಪೊಲೀಸರಿಗಾಗಿ ಕಾದ ಕಳ್ಳ ಎಂಬ ದಾಖಲೆ ಈತನೇ ಹೆಸರಿನಲ್ಲೇ ಇರಬಹುದು.

ಟೆಕ್ಸಾಸ್‌ನಲ್ಲಿ ಸೊಂಟದ ಮಟ್ಟ ಪ್ರವಾಹದ ನೀರು ತುಂಬಿದ್ದರೂ ಈ ವೃದ್ಧೆಯರು ಸ್ವೆಟರ್ ಹೆಣೆಯುತ್ತಲೋ, ಸಂಗೀತ ಕೇಳುತ್ತಲೋ ಆರಾಮವಾಗಿ ಕಾಲ ಕಳೆದರಂತೆ. ಧಾವಂತದಿಂದ ಓಡಾಡಿ ಒಟ್ಟುಗೂಡಿಸಲು ಅಂತಹ ಆಸ್ತಿ–ಸಂಪತ್ತೂ ಇಲ್ಲ ವೃದ್ಧಾಶ್ರಮದಲ್ಲಿರುವ ಈ ವೃದ್ಧೆಯರಿಗೆ. ಜೀವನ ಪ್ರೀತಿ ಅಂದರೆ ಇದೇ ಇರಬಹುದು.





ಜರ್ಮನಿಯಲ್ಲಿ ಬೆರಳಿನ ಕುಸ್ತಿ ಭಾರಿ ಜನಪ್ರಿಯವಂತೆ. ಸಾಮಾನ್ಯವಾಗಿ ತುರುಸಿನ ಸ್ಪರ್ಧೆ ಇರುವ ಈ ಕುಸ್ತಿಯಲ್ಲಿ ಮೈ ಬೆಳೆಸುವ ಕಷ್ಟವೂ ಇಲ್ಲ; ಹಣಾಹಣಿ ಭಯಂಕರವಾಗಿದ್ದರೆ ಒಂದು ಬೆರಳು ಹೋಗುತ್ತದಷ್ಟೆ.

ಜಪಾನಿನಲ್ಲಿ ಶವ ಸಂಸ್ಕಾರದ ವೇಳೆ ಪುರೋಹಿತ ಸಿಕ್ಕಿಲ್ಲವಲ್ಲ ಎಂದು ಚಿಂತಿಸುವ ಅಗತ್ಯವಿಲ್ಲವಂತೆ. ಮಂತ್ರ ಉದುರಿಸುವ ರೋಬಾಟ್ ಅನ್ನು ಅಲ್ಲಿಯ ಕಂಪೆನಿಯೊಂದು ತಯಾರಿಸಿದೆ. ಜೊತೆಗೆ ಕಡಿಮೆ ಶುಲ್ಕ ವಿಧಿಸಿ ಪುರೋಹಿತರಿಗೆ ಪ್ರಬಲ ಪೈಪೋಟಿ ನೀಡಲು ಸಜ್ಜಾಗಿದೆಯಂತೆ. ಬೇಡಿಕೆ ಕಾಯ್ದುಕೊಳ್ಳಲು ಪುರೋಹಿತ ವರ್ಗದವರು ಇನ್ನೇನು ಮಾಡುತ್ತಾರೋ!



ನ್ಯೂಯಾರ್ಕ್‌ನಲ್ಲಿ ಈ ಶೌಚಾಲಯದ ಹೊರಗಡೆ ಜನ ಸರತಿ ಸಾಲಿನಲ್ಲಿ ನಿಂತರಂತೆ. ನಮ್ಮ ಸಾರ್ವಜನಿಕ ಶೌಚಾಲಯಗಳ ಸ್ಥಿತಿ ಅಲ್ಲಿಯೂ ಬಂತಲ್ಲ ಎಂದು ಖುಷಿಪಡುವ ಮೊದಲು ಒಂದು ಸಣ್ಣ ಅಡಿಟಿಪ್ಪಣಿ– ಸರತಿ ಸಾಲು ಅದನ್ನು ಬಳಸಲು ಅಲ್ಲ, ನೋಡಲಂತೆ. ವಸ್ತುಸಂಗ್ರಹಾಲಯದಲ್ಲಿರುವ ಈ ಅಪ್ಪಟ ಚಿನ್ನದ ಶೌಚಾಲಯದ ಹೆಸರು ‘ಅಮೆರಿಕ’ ಅಂತೆ. ಬಳಸಲು ಬಾರದ ಶೌಚಾಲಯಕ್ಕೆ ಈ ಹೆಸರು ಇಡಬಾರದಿತ್ತು.